ಕರ್ನಾಟಕ ಸರ್ಕಾರ (ಸಿ.ಆರ್.ಪಿ.೬೭)

| |
|---|
| **ಹೇಳಿಕೆ ಹಾಳೆ (ಆರ್.ಪಿ.ಸಂಖ್ಯೆ ೫೭) ನಮೂನೆ ಸಂಖ್ಯೆ ೪ (ಸಿವಿಲ್)** |

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಹೊಸಕೋಟೆ**

**ಇವರ ನ್ಯಾಯಾಲಯದಲ್ಲಿ.**

**ಸಿ.ಸಿ. ನಂಬರ್ ೧೫೦೪-೨೦೧೮**

.ವಿರುದ್ದ

ಪಿ.ಡಬ್ಲೂ:-೫

ಸಿ.ಡಬ್ಲೂ:-೬

ಹೆಸರು : ಸಿದ್ದರಾಜು

ತಂದೆಯ ಹೆಸರು : ನಾಗಯ್ಯ

ವಯಸ್ಸು : ೬೪ ವರ್ಷ

ಉದ್ಯೋಗ : ನಿವೃತ್ತ ಪೊಲೀಸ್ ಉಪನಿರೀಕ್ಷಕರು

ವಾಸಸ್ಥಳ : ರಾಮನಗರ

ದಿ: ೧೭-೦೨-೨೦೨೬ ರಂದು ಸತ್ಯ ಪ್ರತಿಜ್ಞೆ ಮೇಲೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ: ಸಹಾಯಕ ಸರ್ಕಾರಿ ಅಭಿಯೋಜಕರಿಂದ**

೨೦೧೫ ರಿಂದ ೨೦೨೦ನೇ ಸಾಲಿನವರೆಗೆ ಹೊಸಕೋಟೆ ಪೊ.ಠಾಣೆಯಲ್ಲಿ ಸಹಾಯಕ ಪೊಲೀಸ್ ಉಪನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ: ೩೧.೧೦.೨೦೧೮ ರಂದು ಸಂಜೆ ೭.೩೦ ಗಂಟೆ ಸಮಯದಲ್ಲಿ ಚಾ.ಸಾ.೧ ರವರು ಠಾಣೆಗೆ ಹಾಜರಾಗಿ ನೀಡಿದ ಲಿಖಿತ ಪಿರ್ಯಾದ್ದನ್ನು ಸ್ವಿಕರಿಸಿಕೊಂಡು ಠಾಣಾ ಅಪರಾಧಿಕ ಕ್ರಮ ಸಂಖ್ಯೆ ೫೦೨-೨೦೧೮ ಭಾ.ದಂ.ಸಂ.ಕಲಂ ೩೨೩,೩೪೧,೫೦೪ ಮತ್ತು ೫೦೬ ಸಹವಾಚಕ ೩೪ ರಡಿಯಲ್ಲಿ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ತದನಂತರ ಪ್ರಸ್ತುತ ಪ್ರಕರಣದ ಮುಂದುವರೆದ ತನಿಖೆ ಕುರಿತು ಕಡತವನ್ನು ಚಾ.ಸಾ.೭ ರವರಿಗೆ ಹಸ್ತಾಂತರಿಸಿರುತ್ತೇನೆ.

ಈಗ ನನಗೆ ತೋರಿಸಿದ ನಿಪಿ.೧ ರಲ್ಲಿರುವ ಸಹಿ ನನ್ನದು. ಸದರಿ ದಾಖಲೆಯು ನಾನು ಸ್ವೀಕರಿಸಿಕೊಂಡ ಪಿರ್ಯಾದ್ದು ಆಗಿರುತ್ತದೆ. ನಿಪಿ.೧ ರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ.೧(ಬಿ) ಎಂದು ಗುರುತಿಸಲಾಯಿತು. ಈಗ ನನಗೆ ತೋರಿಸಿದ ದಾಖಲೆಯಲ್ಲಿರುವ ಸಹಿ ನನ್ನದು. ಸದರಿ ದಾಖಲೆಯು ನಾನು ನ್ಯಾಯಾಲಯಕ್ಕೆ ನಿವೇದಿಸಿಕೊಂಡ ಪ್ರಥಮ ವರ್ತಮಾನ ವರದಿ ಆಗಿರುತ್ತದೆ. ಸದರಿ ಪ್ರಥಮ ವರ್ತಮಾನ ವರದಿಯನ್ನು ನಿಪಿ.೫ ಎಂದು, ಸಾಕ್ಷಿಯ ಸಹಿಯನ್ನು ನಿಪಿ.೫(ಎ) ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲು</u>:** ಆರೋಪಿ ಪರ ಶ್ರೀ ಎ.ಎಂ ವಕೀಲರು ಸಮಯ ಕೋರಿದ್ದು ಕೋರಿಕೆಯಲ್ಲಿ ಯಾವುದೇ ಸಮಂಜಸ ಕಾರಣಗಳು ಇರದ ಮೇರೆಗೆ ಪಾಟೀ ಸವಾಲು ಏನು ಇಲ್ಲ ಎಂದು ತೆಗೆದುಕೊಳ್ಳಲಾಯಿತು.
**<u>ಮರುವಿಚಾರಣೆ</u>:** –ಇಲ್ಲ–
(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

**ಓ.ಹೇ.ಕೇ.ಸ.ಇದೆ**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ**
**ಹೊಸಕೋಟೆ.**